**ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ (ರಿ), ಬೆಂಗಳೂರು – 560 023.**

**ದಿನಾಂಕ: 11–11–2025 – ಮಂಗಳವಾರ**

# 21ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯ

## ಸಚಿತ್ರಗಳ ಪಕ್ಷಿ ನೋಟ

ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘವು ತನ್ನ 21ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯನ್ನು ದಿನಾಂಕ: 11–11–2025 ರಂದು ಮಂಗಳವಾರ ಸಂಜೆ 04–00 ಗಂಟೆಯಿಂದ ಸಂಘದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು.









ಕಾರ್ಯಕ್ರಮದ ಆರಂಭಕ್ಕೂ ಮೊದಲು, ಆಗಮಿಸಿದ್ದ ಎಲ್ಲ ಸದಸ್ಯರಿಗೆ ಕಾಫಿ/ಟೀ ಜೊತೆಗೆ ಲಘು ಉಪಹಾರವನ್ನು ಏರ್ಪಡಿಸಲಾಗಿತ್ತು.



















ಅಪರೂಪಕ್ಕೆ ಭೇಟಿಯಾದ ಸಹಪಾಠಿಗಳು, ಸಹೋದ್ಯೋಗಿಗಳು, ಹಿರಿಯ/ಕಿರಿಯ ನಿವೃತ್ತ ಅಧಿಕಾರಿಗಳು ಪರಸ್ಪರ ಕುಶಲೋಪರಿ ವಿಚಾರಿಸುತ್ತಾ ಸಂಜೆಯ ಲಘು ಉಪಹಾರ ಹಾಗೂ ಕಾಫಿ/ಟೀ ಯನ್ನು ಸವಿದರು.











ಸಂಜೆಯ ಲಘು ಉಪಹಾರದ ನಂತರ ಆಗಮಿಸಿದ್ದ ಸದಸ್ಯರೆಲ್ಲರೂ ತಮ್ಮ ಆಗಮನವನ್ನು ಖಚಿತಪಡಿಸಲು ನೋಂದಣಾ ಪ್ರಕ್ರಿಯೆಯಲ್ಲಿ ಭಾಗವಹಿಸಿ ತಮ್ಮ ಹೆಸರುಗಳನ್ನು ನೋಂದಾಯಿಸಿದ ಸಂದರ್ಭದ ಕೆಲವು ಚಿತ್ರಗಳು...











ಕಾರ್ಯಕ್ರಮದ ನಿರೂಪಕರಾದ ಶ್ರೀ ಎ. ಕೆ. ತಿಮ್ಮಯ್ಯ, ವಲಯ ಸಂಘಟನಾ ಕಾರ್ಯದರ್ಶಿ ರವರು ಸಭೆಯಲ್ಲಿ ಹಾಜರಿದ್ದ ಸರ್ವರಿಗೂ ನಮಸ್ಕರಿಸುತ್ತಾ ಸಭೆಯನ್ನು ಆರಂಭಿಸಿದರು.











ಸಂಘದ ಹಿರಿಯ ಸದಸ್ಯರುಗಳು, ಸಂಘದ ಮಾರ್ಗದರ್ಶಿಗಳು, ಅಧ್ಯಕ್ಷರೂ ಆದ ಶ್ರೀ ಕೆ. ಬಿ. ಬೆಟ್ಟೇಗೌಡ ರವರು, ಹಿರಿಯ ಸದಸ್ಯರು ಹಾಗೂ ಪದಾಧಿಕಾರಿಗಳೊಂದಿಗೆ ಜ್ಯೋತಿ ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಲಾಯಿತು.



ಪ್ರತೀತಿಯಂತೆ ಉದ್ಘಾಟನೆಯ ನಂತರ ಕಾರ್ಯಕಾರೀ ಸಮಿತಿ ಸದಸ್ಯರಾದ ಶ್ರೀ ಎಂ. ಎನ್. ಮಂಜೇಗೌಡ ರವರಿಂದ ಪ್ರಾರ್ಥನಾ ಕಾರ್ಯಕ್ರಮ ಶುಭಾರಂಭವಾಯಿತು. ನಾಡಗೀತೆಯ ಧ್ವನಿಮುದ್ರಿಕೆಯನ್ನು ನುಡಿಸಿ, ಜೊತೆಗೆ ಹಾಡಲಾಯಿತು.

ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿಯವರಾದ ಶ್ರೀ ಎನ್. ಎಮ್. ರಾಮಲಿಂಗಪ್ಪ ರವರು, ಸಂಘದ ಪ್ರಸ್ತುತ ಸಾಲಿನ ಸರ್ವ ಸದಸ್ಯರ ಮಹಾಸಭೆಗೆ ಆಗಮಿಸಿದ್ದ ಸಂಘದ ಹಿರಿಯ/ಕಿರಿಯ ಸದಸ್ಯರೂ ಸೇರಿದಂತೆ ಎಲ್ಲರಿಗೂ ಸಂಘದ ಅಧ್ಯಕ್ಷರು ಹಾಗೂ ಎಲ್ಲಾ ಪದಾಧಿಕಾರಿಗಳ ಪರವಾಗಿ ಹಾರ್ದಿಕವಾದ ಸ್ವಾಗತವನ್ನು ಕೋರಿದರು.



ಸಂಘದ ಸದಸ್ಯರಲ್ಲಿ ಈ ಬಾರಿ 80 ವರ್ಷಕ್ಕೂ ಮೇಲ್ಪಟ್ಟ ಒಂಬತ್ತು ಮಂದಿ ಹಿರಿಯ ಸದಸ್ಯರನ್ನು ಸನ್ಮಾನಿಸಲು ಆಹ್ವಾನಿಸಲಾಗಿತ್ತು. ಆದರೆ ಕಾರಣಾಂತರಗಳಿಂದ ಕೆಲವರು ಆಗಮಿಸಲು ಸಾಧ್ಯವಾಗಲಿಲ್ಲ. ಅದರಲ್ಲಿ ಐದು ಮಂದಿ ಹಾಜರಾಗಿದ್ದರು. ಶ್ರೀ ಸಿ.ಬಿ. ಪೂವಯ್ಯ ಎಸ್.ಪಿ (ನಿ), ಶ್ರೀ ಎಸ್.ವಿ. ಮಠಪತಿ, ಡಿ.ಎಸ್.ಪಿ. (ನಿ), ಶ್ರೀ ಡಿ.ವಿ. ಶ್ರೀಧರ ಮೂರ್ತಿ, ಡಿ.ಸಿ.ಪಿ. (ನಿ). ಶ್ರೀ ಯು. ಕೃಷ್ಣಮೂರ್ತಿ, ಎಸ್.ಪಿ. (ನಿ.) ಶ್ರೀ ರಾಜಣ್ಣ ಎಂ.ಎನ್., ಡಿ.ಎಸ್.ಪಿ. (ನಿ), ರವರುಗಳು ಹಾಜರಿದ್ದರು. ಸಂಘದ ವಲಯ ಸಂಘಟನಾ ಕಾರ್ಯದರ್ಶಿಯವರಾದ ಶ್ರೀ ಕೆ.ಸಿ.ವಿ. ಮಾನೆ ಯವರು ಹಿರಿಯರ ಮಾಹಿತಿಯನ್ನು ಉಲ್ಲೇಖಿಸಿದರು.





ಸಂಘದ ವಲಯ ಸಂಘಟನಾ ಕಾರ್ಯದರ್ಶಿಯವರಾದ ಶ್ರೀ ಸಿ. ಕಿರಣ್ ರವರು ಪ್ರಸ್ತುತ ವರ್ಷದಲ್ಲಿ ಸ್ವರ್ಗಸ್ಥರಾದ 11 ಜನ ನಿವೃತ್ತ ಪೊಲೀಸ್ ಅಧಿಕಾರಿಗಳ ನಾಮಪಠಣ ಮಾಡಿದರು. ಮೃತರನ್ನು ಸ್ಮರಿಸಿ ಅವರ ಆತ್ಮಕ್ಕೆ ಚಿರಶಾಂತಿಯನ್ನೂ, ಅವರ ಕುಟುಂಬ, ಬಂಧು-ಮಿತ್ರರಿಗೆ ಮೃತರ ಅಗಲುವಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ನೀಡಲೆಂದು ದೇವರನ್ನು ಪ್ರಾರ್ಥಿಸುತ್ತಾ ಸಭೆಯು ಒಂದು ನಿಮಿಷ ಮೌನಾಚರಣೆಯನ್ನು ಸಲ್ಲಿಸಿತು.









ಹಿಂದಿನ ಸಾಲಿನ “ಸರ್ವ ಸದಸ್ಯರ ಮಹಾಸಭೆ”ಯ ನಡಾವಳಿಗಳ ಸಂಕ್ಷಿಪ್ತ ಮಂಡನೆ ಹಾಗೂ ಕಾರ್ಯದರ್ಶಿಯವರ ವಿಸ್ತೃತ ವರದಿಯನ್ನು ಸಂಘದ ಕಾರ್ಯದರ್ಶಿಯವರಾದ ಶ್ರೀ ಎಮ್. ಶಂಕರಪ್ಪ ನವರು ಪ್ರಸ್ತುತಪಡಿಸಿದರು.

*ಅನಂತರ, ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಕಾರ್ಯದರ್ಶಿಗಳಾದ ಶ್ರೀ ಎಂ. ಶಂಕರಪ್ಪ ನವರು ಮಂಡಿಸಿದ ವಾರ್ಷಿಕ ವರದಿಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.*

ಎಲ್ಲ ಸನ್ಮಾನಿತ ಹಿರಿಯ ಸದಸ್ಯರ ಪರವಾಗಿ ಶ್ರೀ ಡಿ.ವಿ. ಶ್ರೀಧರ ಮೂರ್ತಿ, ಡಿ.ಸಿ.ಪಿ.(ನಿ.) ರವರು, ಗೌರವಾನ್ವಿತ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿಗಳು, ಮಿತ್ರರು, ಬಂಧು-ಬಳಗದವರು ಸೇರಿದಂತೆ ಸರ್ವರಿಗೂ ನಮಸ್ಕರಿಸುತ್ತಾ, ಈ ಸನ್ಮಾನ ಸಮಾರಂಭ ಹಮ್ಮಿಕೊಂಡಿರುವ ಕಾರಣ ಎಲ್ಲರನ್ನೂ ಭೇಟಿಯಾಗಲು ಉಪಯೋಗಕರವಾಗಿದೆ ಎಂದು ನುಡಿದರು. ತಮ್ಮ ಅನುಭವ ಹಂಚಿಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟ ಸರ್ವರಿಗೂ ವಂದಿಸಿದರು.

ಸಂಘದ ಸರ್ವತೋಮುಖ ಬೆಳವಣಿಗೆಗೆ, ಸಂಘದ ಸದಸ್ಯರ, ರಾಜ್ಯದ ನಿವೃತ್ತ ಪೊಲೀಸ್ ಅಧಿಕಾರಿ ಸಿಬ್ಬಂದಿಯವರ ಆರೋಗ್ಯ ಕಾಳಜಿ ಮತ್ತು ಕ್ಷೇಮಾಭಿವೃದ್ಧಿಗಾಗಿ ಸತತವಾಗಿ ಸಾಕಷ್ಟು ಆಸಕ್ತಿಯಿಂದ ಗಮನವಹಿಸಿ ಪ್ರಯತ್ನಗಳನ್ನು ಮಾಡಿ, ಗುರಿ ಮುಟ್ಟುವಲ್ಲಿ ಹಲವು ಯೋಜನೆಗಳನ್ನು ಮಂಜೂರು ಮಾಡಿಸಿಕೊಳ್ಳುವಲ್ಲಿ ಸಂಘದ ಅಧ್ಯಕ್ಷರ ನೇತೃತ್ವದಲ್ಲಿ ಸಂಘದ ಪದಾಧಿಕಾರಿಗಳೆಲ್ಲ ಸರ್ವ ಪ್ರಯತ್ನ ಮಾಡಿರುವುದನ್ನು ಸಭೆಗೆ ಕಾರ್ಯದರ್ಶಿಗಳು ತಿಳಿಸಿದರು. ಕಮ್ಯುಟೇಶನ್ ಹಾಗೂ ನೂತನ ಕಟ್ಟಡದ ಪ್ರಗತಿ ಸಂಬಂಧವಾಗಿಯೂ ಸುದೀರ್ಘವಾಗಿ ವಿವರಿಸಿದರು. ಇಲ್ಲಿಯವರೆಗೆ ಕಟ್ಟಡ ನಿಧಿಗೆ ದೇಣಿಗೆ ನೀಡದೇ ಇರುವವರು ದಯಮಾಡಿ ದೇಣಿಗೆ ನೀಡಲು ಮನವಿ ಮಾಡಿದರು. ಎಲ್ಲಾ ಗೌರವಾನ್ವಿತ ಸದಸ್ಯರೆಲ್ಲರೂ ಸಂಘಕ್ಕೆ ಒಳ್ಳೆಯ ಪ್ರೋತ್ಸಾಹ, ಸಹಕಾರ, ಸಲಹೆ ಮತ್ತು ಮಾರ್ಗದರ್ಶನ ನೀಡಿ ಸಂಘವನ್ನು ಮುನ್ನಡೆಸಿದ್ದಕ್ಕಾಗಿ ಎಲ್ಲರಿಗೂ ತುಂಬು ಹೃದಯದಿಂದ ಕೃತಜ್ಞತೆಗಳನ್ನು ಸಲ್ಲಿಸಿದರು. ಈ ಒಂದು ವರ್ಷದಲ್ಲಿ ಸಂಘದ ಎಲ್ಲಾ ಕಾರ್ಯ ಚಟುವಟಿಕೆಗಳಲ್ಲಿ ಸಕಾರಾತ್ಮಕವಾಗಿ, ಕ್ರಿಯಾಶೀಲರಾಗಿ ಭಾಗವಹಿಸಿ ಸಂಘದ ಪುರೋಭಿವೃದ್ಧಿಗೆ ಶ್ರಮಿಸುತ್ತಿರುವ ಸಂಘದ ಅಧ್ಯಕ್ಷರು ಮತ್ತು ಎಲ್ಲಾ ಪದಾಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಿದರು.

**ಸಂಘದ ಖಜಾಂಚಿಯಾದ ಶ್ರೀ ಕೆ.ಹೆಚ್. ಜಗದೀಶ್ ರವರು ಸಂಘದ ಆಡಿಟ್ ವರದಿ ಮತ್ತು 2025-26 ನೇ ಸಾಲಿನ ಅಂದಾಜು ಆಯ-ವ್ಯಯ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಿದರು.**





***ಸಂಘದ ಖಜಾಂಚಿಯವರಾದ ಶ್ರೀ ಕೆ.ಹೆಚ್. ಜಗದೀಶ್ ರವರು ಮಂಡಿಸಿದ ಆಡಿಟ್ ವರದಿ ಮತ್ತು 2025-26 ನೇ ಸಾಲಿನ ಅಂದಾಜು ಆಯ-ವ್ಯಯ ಪಟ್ಟಿಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.***



ಕಲಾಪದ ಪ್ರಶ್ನೋತ್ತರ ವೇಳೆಯಲ್ಲಿ ಹಿರಿಯ ಸದಸ್ಯರಾದ ಶ್ರೀ ಎಸ್.ಪಿ. ನಾಯಕ್ ರವರು ಮಾತನಾಡಿ, ಸಂಘದ ಕಾರ್ಯ ಚಟುವಟಿಕೆಗಳ ಬಗ್ಗೆ ಪ್ರಶಂಸಿದರು. ಹಾಗೆಯೇ ಕಟ್ಟಡ ನಿರ್ಮಾಣದ ಬಗ್ಗೆ ಮಾತನಾಡುತ್ತಾ ಸಂಘದ ಪದಾಧಿಕಾರಿಗಳ ಅಭಿವೃದ್ಧಿ ಹಾಗೂ ಕ್ರಿಯಾಶೀಲತೆಯನ್ನು ಶ್ಲಾಘಿಸಿದರು.

ಅಧ್ಯಕ್ಷರ ಭಾಷಣದ ಮಧ್ಯೆಯಲ್ಲಿ, ಸಂಘದ ಉಪಾಧ್ಯಕ್ಷರಾದ ಶ್ರೀ ಜಿ.ಸಿ. ಮಂಜುನಾಥ್ ಹಾಗೂ ಕಾರ್ಯಕಾರೀ ಸಮಿತಿ ಸದಸ್ಯರಾದ ಶ್ರೀ. ಬಿ.ಎಸ್. ಶಾಂತಕುಮಾರ್ ರವರುಗಳು ಕಾರ್ಯಕ್ರಮದ ಮಧ್ಯೆಯಲ್ಲಿ ಚುನಾವಣಾ ಪ್ರಕ್ರಿಯೆಯ ವಿರುದ್ಧ ತಾವು ನ್ಯಾಯಾಲಯದ ಮೆಟ್ಟಿಲೇರಿರುವ ವಿಷಯವನ್ನು ಸಭೆಗೆ ತಿಳಿಸಿದರು.







ಸಂಘದ ಹಿರಿಯ ಸದಸ್ಯರೂ ಹಾಗೂ ನಿಕಟಪೂರ್ವ ಅಧ್ಯಕ್ಷರೂ ಆದ ಶ್ರೀ ಬಿ.ಕೆ. ಶಿವರಾಮ್ ರವರು ಮಾತನಾಡಿ ಚುನಾವಣಾ ಪ್ರಕ್ರಿಯೆಯು ಮಾತುಕತೆಯಲ್ಲಿ ಬಗೆಹರಿಸಿಕೊಳ್ಳಬಹುದಾದ ಆಂತರಿಕ ವಿಷಯ ಎಂದು ನುಡಿದು, ನಾವೆಲ್ಲ ಕುಳಿತು ಪರಿಹರಿಸಿಕೊಳ್ಳೋಣ ಎಂದು ನುಡಿದರು.

ಸಂಘದ ಅಧ್ಯಕ್ಷರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ 21ನೇ ಸರ್ವ ಸದಸ್ಯರ ಸಭೆಯ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಎಲ್ಲಾ ಸರ್ವ ಸದಸ್ಯರ ಸಲಹೆ, ಸೂಚನೆಗಳು, ಪ್ರೋತ್ಸಾಹ ಮತ್ತು ಸಹಕಾರವನ್ನು ಗೌರವಿಸುತ್ತಾ, ಸಲಹೆ – ಸೂಚನೆಗಳು ನಮಗೆ ಶಕ್ತಿ ಎಂದು ನುಡಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಸರ್ವ ಸದಸ್ಯರಿಗೂ ತಮ್ಮ ಹೃತ್ಪೂರ್ವಕವಾದ ಧನ್ಯವಾದಗಳನ್ನು ಸಲ್ಲಿಸುತ್ತಾ ಎಲ್ಲರಿಗೂ ಆಭಾರಿಯಾಗಿದ್ದೇವೆ ಎಂದು ತಿಳಿಸಿದರು ಹಾಗೆಯೇ ಸಂಘದ ಚುನಾವಣೆಗೆ ಸಂಬಂಧಿಸಿದಂತೆ ನ್ಯಾಯಾಲಯದ ಮೆಟ್ಟಿಲೇರಿರುವುದಕ್ಕೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು. ಸಂಘದಲ್ಲಿ ವ್ಯಕ್ತಿ ಮುಖ್ಯವಲ್ಲ. ಸಂಘದ ಹಿತ ಪರಮೋಚ್ಚ. ಸೇವಾ ಮನೋಭಾವಕ್ಕೆ ಸಂಘದಲ್ಲಿ ಆಶ್ರಯವೇ ಹೊರತು ರಾಜಕೀಯವಲ್ಲ. ಸಂಘದ ಅಭಿವೃದ್ಧಿಯೇ ನಮ್ಮೆಲ್ಲರ ಆಶಯವಾಗಬೇಕು. ಅಧ್ಯಕ್ಷರು, ಮತ್ತೊಮ್ಮೆ ಸರ್ವ ಸದಸ್ಯರಿಗೆ, ಕಾರ್ಯದರ್ಶಿಗಳ ವಾರ್ಷಿಕ ವರದಿ ಮತ್ತು ಖಜಾಂಚಿಯವರು ಮಂಡಿಸಿದ ಲೆಕ್ಕ ಪತ್ರಗಳು, ಅಂದಾಜು ಆಯ ವ್ಯಯ ಪಟ್ಟಿಯನ್ನು ಅನುಮೋದಿಸಲು ವಿನಂತಿಸಿದಾಗ ಸರ್ವ ಸದಸ್ಯರೆಲ್ಲರೂ ಏಕ ಕಂಠದಿಂದ ಕೈ ಎತ್ತುವ ಮೂಲಕ ಅನುಮೋದಿಸಿದರು. ಅಧ್ಯಕ್ಷರು, ತಮ್ಮ ಅಧ್ಯಕ್ಷೀಯ ಭಾಷಣವನ್ನು ಮುಗಿಸಿದರು.

ವಂದನಾರ್ಪಣೆಯ ನಂತರ ಸಂಘದ ಚುನಾವಣೆಗೆ ಸಂಬಂಧಿಸಿದ ಮಾಹಿತಿಯನ್ನು ಹಂಚಿಕೊಳ್ಳಲು ಚುನಾವಣೆ ನಡೆಸಲು ನೇಮಕವಾಗಿದ್ದ ಹಿರಿಯ ಸದಸ್ಯರೂ ಹಾಗೂ ಮುಖ್ಯ ಚುನಾವಣಾಧಿಕಾರಿಗಳಾದ ಶ್ರೀ ಎನ್. ನಾಗರಾಜ ಮತ್ತು ಚುನಾವಣಾಧಿಕಾರಿಗಳಿಗೆ ವೇದಿಕೆಯನ್ನು ಬಿಟ್ಟುಕೊಡಲಾಯಿತು.







ಸಂಘದ ಕಾರ್ಯಕಾರೀ ಸಮಿತಿ ಸದಸ್ಯರಾದ ಶ್ರೀ ಹೆಚ್. ಸುಬ್ಬಣ್ಣ ರವರಿಂದ ಮೊದಲಿಗೆ ಸರ್ವ ಸದಸ್ಯರ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಸಂಘದ ಅಧ್ಯಕ್ಷರಾದ ಶ್ರೀ ಕೆ. ಬಿ. ಬೆಟ್ಟೇಗೌಡ ರವರಿಗೆ, ಉಪಾಧ್ಯಕ್ಷರುಗಳು, ಕಾರ್ಯದರ್ಶಿಗಳೂ ಸೇರಿದಂತೆ, ಸಂಘದ ಎಲ್ಲ ಪದಾಧಿಕಾರಿಗಳ ಪರವಾಗಿ ನೆರೆದಿದ್ದ ಎಲ್ಲ ಸದಸ್ಯರಿಗೆ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸಿದರು.



ಮುಖ್ಯ ಚುನಾವಣಾಧಿಕಾರಿಗಳಾದ ಶ್ರೀ ಎನ್. ನಾಗರಾಜ ರವರು ತಾವು ಕೈಗೊಂಡ ಚುನಾವಣಾ ಪ್ರಕ್ರಿಯೆಗಳ ಬಗ್ಗೆ ಮಾಹಿತಿ ನೀಡಿ, ಅವಿರೋಧವಾಗಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರವನ್ನು ನೀಡಿದರು.























ಚುನಾವಣಾ ಪ್ರಕ್ರಿಯೆಯನ್ನು ಸುಗಮವಾಗಿ ನಡೆಸಿಕೊಟ್ಟ ಮುಖ್ಯ ಚುನಾವಣಾ ಅಧಿಕಾರಿಗಳು ಹಾಗೂ ಅವರ ತಂಡದ ಚುನಾವಣಾಧಿಕಾರಿಗಳಿಗೆ ಸಂಘದ ವತಿಯಿಂದ ಅಧ್ಯಕ್ಷರಾದ ಶ್ರೀ ಕೆ.ಬಿ. ಬೆಟ್ಟೇಗೌಡ ರವರು ಮತ್ತು ಪದಾಧಿಕಾರಿಗಳ ತಂಡವು ಹೂಗುಚ್ಛ ನೀಡಿ ಅಭಿನಂದಿಸಿದರು.













**ಕೆಲವು ಫೋಟೋಗಳು;**



























ಕಾರ್ಯಕ್ರಮದ ಅಂತ್ಯದಲ್ಲಿ ಎಲ್ಲರಿಗೂ ಆಯೋಜಿಸಿದ್ದ ಪುಷ್ಕಳ ಭೋಜನವನ್ನು ಆಗಮಿಸಿದ್ದ ಸದಸ್ಯರೆಲ್ಲ ಸವಿದು ಸಂಭ್ರಮಿಸಿದರು.

























**ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಮಹಾಸಭೆ ಕಾರ್ಯಕ್ರಮ ಸಂಪನ್ನ ವಾಗಿರುತ್ತದೆ.**

**ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ (ರಿ.), ಬೆಂಗಳೂರು – 560 023.**

* * * * *